ದಿನದ ಮಟ್ಟಿಗೆ ಜಬಲಪುರಕ್ಕೆ ಹೋದೆ, ಅಲ್ಲಿಂದ ಬಿಡುಗಡೆಯ ಪತ್ರವನ್ನು ತರಬೇಕಿತ್ತು. ಅಷ್ಟರಲ್ಲಿ ಎಲ್ಲರಿಗೆ ರಿತಿಕ್‌ನಿಂದ ನಾನು ಬೇರೆಯಾದ ಬಗ್ಗೆ ವಿಷಯ ತಿಳಿದಿತ್ತು. ಕೀರ್ತಿ ಮಾತ್ರ ಯಾರಿಗೂ ಹೇಳಿರಲಿಲ್ಲ. ಆದರೆ ರಿತಿಕ್ ನಾನು ರಜದಿಂದ ಯಾವಾಗ ಮರಳಿ ಬರುತ್ತಿದ್ದೇನೆ ಎಂದು ತಿಳಿಯಲು ಕಚೇರಿಯನ್ನು ಅನೇಕ ಬಾರಿ ಸುತ್ತು ಹಾಕಿದ್ದ.

‘ನೀನು ಮನೆಯನ್ನು ಮಾರಿ ಸುಗಂಧಾಳ ಹಣವನ್ನು ಕೊಡು ಎಂದು ನಾನು ರಿತಿಕ್‌ಗೆ ತಿಳಿಯಪಡಿಸಿದ್ದೇನೆ’, ಸಿಕರವಾರರು ನನಗೆ ಹೇಳಿದರು.

ನಾನು ಇದನ್ನೆಂದೂ ಬಯಸುತ್ತಿರಲಿಲ್ಲ. ಅದು ಸಿಕರವಾರರ ಸ್ವಂತ ಅಭಿಪ್ರಾಯವಾಗಿತ್ತು. ವಾಸ್ತವವಾಗಿ ನನ್ನ ಕಚೇರಿಯ ಸಿಬ್ಬಂದಿ, ಬೆಳಿಗ್ಗೆ ಹೋದವನು ಸಂಜೆ ಮನೆಗೆ ಮರಳಿ ಬರುತ್ತಾನೆ ಎಂದು ರಿತಿಕ್‌ನಿಂದ ನಾನು ಬೇರೆಯಾದ ಬಗ್ಗೆ ಹೇಳುತ್ತಿದ್ದರು.

‘ನೀನು ಟ್ರಾನ್ಸ್‌ಫರ್ ಮಾಡಿಸಿಕೊಂಡು ಒಳ್ಳೆಯದನ್ನು ಮಾಡಿದೆ’ ಕೀರ್ತಿ ಹೇಳಿದಳು.

‘ನಿನ್ನನ್ನು ಅಗಲುವ ದುಃಖ ನನಗಾಗುತ್ತದೆ, ನನಗೆ ನಿನ್ನ ಕೊರತೆ ಕಾಡುತ್ತದೆ, ಆದ್ರೆ ನಿನ್ನ ಒಳ್ಳೆಯದಕ್ಕಾಗಿ ಇದು ಒಳ್ಳೆಯದು. ನೀನಲ್ಲಿ ಹೊಸ ಜೀವನವನ್ನು ಆರಂಭಿಸು’.

ಎಲ್ಲರ ಮನಸ್ಸಿನಲ್ಲಿ, ಈಗ ಸ್ವತಂತ್ರವಾಗಿ ಬದುಕುವ ಭೂತ ನನ್ನ ತಲೆಯಿಂದ ಹೋಗಿದೆ, ಈಗ ನಾನು ವಿಧಿವತ್ತಾಗಿ ಮದುವೆಯನ್ನು ಮಾಡಿಕೊಳ್ಳುತ್ತೇನೆ ಎಂಬ ಆಸೆ ಜಾಗೃತವಾಗಿತ್ತು. ಆದರೆ ಅವರು ತಪ್ಪಾಗಿ ಯೋಚಿಸುತ್ತಿದ್ದರು. ನಾನು ಹೀಗೆ ಮಾಡುವ ಹೆಣ್ಣಾಗಿರಲಿಲ್ಲ. ನನಗೆ ನನ್ನ ಹಿಂದಿನ ಜೀವನದ ಬಗ್ಗೆ ಯಾವುದೇ ಪಶ್ಚಾತ್ತಾಪವಿರಲಿಲ್ಲ. ನಾನು ತೀರ್ಮಾನಿಸಲು ಸ್ವತಂತ್ರಳಾಗಿದ್ದೆ.

ನಾನು ಕರ್ತವ್ಯಕ್ಕೆ ಹಾಜರಾಗಲು ಜಬಲಪುರದಿಂದ ನೇರವಾಗಿ ಸಾಗರಕ್ಕೆ ಹೋದೆ. ಅಲ್ಲಿ ಕರ್ತವ್ಯಕ್ಕೆ ಹಾಜರಾಗಿ ಅಂದೇ ಭೂಪಾಲ್‌ಗೆ ಬಂದೆ. ಅಮ್ಮನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಮಹಿಳಾ ಸಿಬ್ಬಂದಿಯವರ ಮನೆ ಸಾಗರದಲ್ಲಿತ್ತು. ಆ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿ ಸಾಗರಕ್ಕೆ ಬಂದೆ. ಈ ಬಾರಿ ಅಮ್ಮ ಸಹ ಜೊತೆಗೆ ಬಂದರು. ಅವರಿಗೆ ನನ್ನ ಜೊತೆಗೆ ಬರುವ ಹಕ್ಕಿತ್ತು. ಅವರು ನಾನು ವಾಸಿಸುವ ಮನೆಯ ವ್ಯವಸ್ಥೆಯನ್ನು ಪರೀಕ್ಷಿಸಿ, ಸಂತುಷ್ಟರಾಗಿ ಮರಳಿ ಹೋದರು. ಅವರು ಹೋಗುವುದಕ್ಕೆ ಮೊದಲು, ತಿಂಗಳಲ್ಲಿ ಒಮ್ಮೆ ಭಾನುವಾರದಂದು ನಮ್ಮ ಮನೆಗೆ ಅವರು ಬರುವುದು, ಇನ್ನೊಂದು ಭಾನುವಾರ ನಾನು ಅವರ ಮನೆಗೆ ಹೋಗುವುದು ಎಂದು ನಿರ್ಧರಿಸಲಾಯಿತು. ಅಂದರೆ ನಾವು ಒಂದು ತಿಂಗಳಿನಲ್ಲಿ ಎರಡು ಬಾರಿ ಭೇಟಿಯಾಗುತ್ತಿದ್ದೆವು. ಆಗ ನಾವು ನಮ್ಮ ನಮ್ಮ ಕಷ್ಟ ಸುಖದ ಬಗ್ಗೆ ಮಾತನಾಡಿಕೊಳ್ಳಬಹುದಾಗಿತ್ತು.

ಈ ನಗರ ನನಗೆ ತುಂಬಾ ಹಿಡಿಸಿತು. ಇದು ಜಬಲಪುರಕ್ಕಿಂತ ಹೆಚ್ಚು ಇಷ್ಟವಾಯಿತು. ನಗರ ಅಷ್ಟೇನೂ ಚಿಕ್ಕದಾಗಿರಲಿಲ್ಲ. ಯಾವುದೇ ಗದ್ದಲ ಕೋಲಾಹಲವಿಲ್ಲದ ಶಾಂತ ನಗರ. ಬೆರೆಯುವ ಜನ. ಇಲ್ಲಿಯ ವಿಶ್ವವಿದ್ಯಾಲಯ ತುಂಬಾ ಇಷ್ಟವಾಯಿತು. ಡಾ. ಹರಿಸಿಂಹ ಗೌರ್ ವಿಶ್ವವಿದ್ಯಾಲಯ ಹೊಸದಾಗಿ ಕೇಂದ್ರೀಯ ವಿಶ್ವವಿದ್ಯಾಲಯವಾಗಿತ್ತು. ವಿಶ್ವವಿದ್ಯಾಲಯದ ಪರಿಸರ ತುಂಬಾ ಸುಂದರವಾಗಿತ್ತು. ಅದರ ಸುತ್ತಮುತ್ತ ಪರ್ವತದ ಪರಿಸರವಿತ್ತು. ಅಲ್ಲಿಂದ ಸಾಗರ ಸರೋವರ ಕಾಣಬರುತ್ತಿತ್ತು. ನಾನು ಭಾನುವಾರದಂದು ಅಮ್ಮನ ಬಳಿಗೆ ಹೋಗದಿದ್ದಾಗ, ಈ ವಿಶ್ವವಿದ್ಯಾಲಯದ ಪರಿಸರದಲ್ಲಿ ಓಡಾಡುತ್ತಿದ್ದೆ. ಅಂದು ಭಾನುವಾರವಾದ್ದರಿಂದ ಬಹುತೇಕ ವಿಭಾಗಗಳು ಮುಚ್ಚಿರುತ್ತಿದ್ದವು. ಆದರೆ ವಿಜ್ಞಾನ ಫ್ಯಾಕಲ್ಟಿಯ ಕೆಲವು ವಿಭಾಗಗಳು ತೆರೆದಿರುತ್ತಿದ್ದವು. ಬಹುಶಃ ಪ್ರಯೋಗಕ್ಕಾಗಿ ವಿದ್ಯಾರ್ಥಿಗಳು ಭಾನುವಾರದಂದೂ ಬರುತ್ತಿದ್ದರು.

‘ನಿಮ್ಮನ್ನು ನಾನಿಲ್ಲಿ ಅನೇಕ ಬಾರಿ ನೋಡಿದ್ದೇನೆ. ನೀವು ಕ್ಯಾಂಪಸ್‌ನಲ್ಲಿಯೇ ಇದ್ದೀರ?’ ಒಂದು ಭಾನುವಾರ ಒಬ್ಬರು ನನ್ನನ್ನು ಕೇಳಿದರು.

‘ಇಲ್ಲ’

‘ನೀವಿಲ್ಲಿ ಯಾವುದಾದ್ರು ಕೋರ್ಸ್ ಮಾಡುತ್ತಿರಬೇಕು?’ ಅವರಿಗೆ ಕುತೂಹಲವಿತ್ತು.

‘ಇಲ್ಲ, ನಾನಿಲ್ಲಿಯ ಸ್ಟೂಡೆಂಟ್ ಅಲ್ಲ. ನಾನಿಲ್ಲಿಗೆ ಅಡ್ಡಾಡಲು ಬರ್ತೇನೆ’ ಎಂದೆ.

‘ಇದು ತುಂಬಾ ಸುಂದರ ಜಾಗವಲ್ವ?’

‘ಹೌದು, ತುಂಬಾ ಸುಂದರವಾಗಿದೆ. ನಾನು ನಿಮ್ಮ ಪರಿಚಯ ಕೇಳಬಹುದೇ?’

‘ನಾನು ಪ್ರಾಧ್ಯಾಪಕ. ನಾನು ಛಿಂದವಾಡಾಕ್ಕೆ ನೇಮಕಗೊಂಡಿದ್ದೇನೆ, ಆದರೆ ಈಗ ಅಧ್ಯಯನ ಮಾಡಲು ರಜದ ಮೇಲೆ ಇಲ್ಲಿಗೆ ಬಂದಿದ್ದೇನೆ’ ಎಂದರು ಅವರು.

‘ಅಂದ್ರೆ? ನೀವು ಬೋಧನೆ ಮಾಡುತ್ತಿದ್ದೀರ?’ ನನಗೆ ಆಶ್ಚರ್ಯವಾಯಿತು.

‘ಹೌದು! ಮಾನವ ಸಂಪನ್ಮೂಲ ಇಲಾಖೆಯಿಂದ ನಾನೊಂದು ಪ್ರಾಜೆಕ್ಟ್ ತಗೊಂಡಿದ್ದೇನೆ, ಅದರ ಬಗ್ಗೆ ಸ್ಟಡಿ ಮಾಡ್ತಿದ್ದೇನೆ. ನನ್ನ ಹೆಸರು ಋಷಭ್ ಜೈನ್’ ಎಂದರು ಅವರು.

‘ಸರಿ, ನೀವು ಹಾಸ್ಟಲ್‌ನಲ್ಲಿದ್ದೀರ?’ ನಾನು ಋಷಭರನ್ನು ಕೇಳಿದೆ.

‘ಇಲ್ಲ, ಇಲ್ಲಿ ನನ್ನ ಸಂಬಂಧಿಕರಿದ್ದಾರೆ, ಅಲ್ಲಿಯೇ ಉಳಿದಿದ್ದೇನೆ, ನೀವು?’

‘ನಾನಿಲ್ಲಿಗೆ ವರ್ಗಾವಣೆಯಾಗಿ ಬಂದಿದ್ದೇನೆ. ಅಮ್ಮ ಭೂಪಾಲ್‌ನಲ್ಲಿದ್ದಾರೆ. ಅಲ್ಲಿ ಅವರು ಸೆಕ್ರೆಟೇರಿಯಟ್‌ನಲ್ಲಿ ಸೆಕ್ಷನ್ ಇನ್‌ಚಾರ್ಜ್ ಆಗಿದ್ದಾರೆ. ನಾನು ಇಲ್ಲಿಯ ನೇಹಾನಗರದಲ್ಲಿ ಮನೆ ಬಾಡಿಗೆಗೆ ತಗೊಂಡಿದ್ದೇನೆ’, ನಾನು ನನ್ನ ಪರಿಚಯ ಹೇಳಿದೆ.

‘ನೇಹಾನಗರ ನಿಮ್ಮ ಕಚೇರಿಯಿಂದ ತುಂಬಾ ದೂರವಿದೆ’.

‘ಹೂಂ, ಆದ್ರೆ ನನಗೆ ನಗರದಿಂದ ಹೊರಗಿರುವುದು ಇಷ್ಟವಾಗುತ್ತದೆ. ನಗರದಲ್ಲಾಗಿದ್ದರೆ ಗದ್ದಲ ಮತ್ತು ದೂಳಿನ ಮಾಲಿನ್ಯವನ್ನು ಅನುಭವಿಸಬೇಕಿತ್ತು’ ಎಂದೆ.

‘ನಗರದ ಜನರ ನಡುವೆ ಇರುವ ಅಭ್ಯಾಸ ನಿಮಗಿಲ್ಲ ಅಂತ ಅನ್ನಿಸುತ್ತೆ’ ಎಂದರು ಋಷಭರು.

‘ಎಕ್ಸಾಕ್ಟಲಿ! ನಾನು ಬಹಿರಂಗ ವಾತಾವರಣದಲ್ಲಿರಲು ಇಷ್ಟಪಡುತ್ತೇನೆ’ ನಾನು ಒಪ್ಪಿಕೊಂಡೆ.

ಅದು ನಮ್ಮ ಮೊದಲ ಪರಿಚಯವಾಗಿತ್ತು. ಈ ಮೊದಲ ಪರಿಚಯ ಯಾವಾಗ ಗಾಢವಾಗುತ್ತಾ ಸಾಗಿತೋ ತಿಳಿಯಲೇ ಇಲ್ಲ. ಋಷಭರು ಅಧ್ಯಯನಕ್ಕಾಗಿ ಒಂದು ವರ್ಷದ ರಜ ಪಡೆದಿದ್ದರು. ಅವರೊಂದಿಗೆ ನನ್ನ ಪರಿಚಯವಾದಾಗ ಅವರು ಸಾಗರಕ್ಕೆ ಬಂದು ಒಂದು ತಿಂಗಳಷ್ಟೇ ಆಗಿತ್ತು. ಅಂದರೆ ಹನ್ನೊಂದು ತಿಂಗಳಿನಲ್ಲಿ ನಾವು ಪರಸ್ಪರ ಪ್ರೀತಿಯಲ್ಲಿ ತೇಲಲಾರಂಭಿಸಿದೆವು. ಮೊದಲ ಬಾರಿ ಒಬ್ಬರ ಬಗ್ಗೆ ಆಕರ್ಷಿತಳಾಗಿ ಹೆಜ್ಜೆ ಹಾಕುವುದರಲ್ಲಿ ಸಮಯ ಹಿಡಿಯುತ್ತದೆ, ಎರಡನೆಯ ಬಾರಿಗೆ ಅಲ್ಲ ಎಂದು ನನಗೆ ಅನ್ನಿಸುತ್ತದೆ.

‘ನನ್ನ ರಜ ಮುಗಿಯುತ್ತಿದೆ. ನಾನು ಮರಳಿ ಛಿಂದವಾಡಾಕ್ಕೆ ಹೋಗ್ಬೇಕು’ ಒಂದು ದಿನ ಋಷಭರು ನನಗೆ ನೆನಪಿಸಿದರು. ಇದನ್ನು ಕೇಳಿ ನನಗೆ ಬೇಸರವಾಯಿತು. ಋಷಭರನ್ನು ಭೇಟಿಯಾದ ನಂತರ ನನ್ನೆಲ್ಲಾ ದುಃಖವನ್ನು ಮರೆತಿದ್ದೆ. ನಾನು ಕಾಪರ್‌ಟೀಯನ್ನು ತೆಗೆಸದೇ ಇದ್ದದ್ದು, ನಾನೆಷ್ಟು ಬಾರಿ ಸಂಭೋಗಕ್ಕೊಳಗಾದರೂ ನನಗೆ ಗರ್ಭಧಾರಣೆಯ ಭಯವಿರದಿದ್ದದ್ದು ನನಗೆ ನೆನಪಿರುತ್ತಿತ್ತು. ಅದೊಂದು ತುಚ್ಛ ಯೋಚನೆಯಾಗಿತ್ತು, ಆದರೆ ಅದು ನನ್ನ ಹಿತಕ್ಕೆ ಸಂಬಂಧಿಸಿದ ಯೋಜನೆಯಾಗಿತ್ತು. ನಾನು ಸ್ವಾತಂತ್ರ್ಯದ ದುರುಪಯೋಗವನ್ನು ಮಾಡುತ್ತಿರಲಿಲ್ಲ. ಒಂದು ಸಮಯದಲ್ಲಿ ನಾನು ಒಬ್ಬಳಾಗಿಯೇ ಇರುತ್ತಿದ್ದೆ. ಈ ಬಾರಿ ನಾನು ಒಂಟಿಯಾಗಿದ್ದೆ. ನನ್ನನ್ನು ಭೇಟಿಯಾಗಲು ಋಷಭರು ಬರುತ್ತಿದ್ದರು.

ಈ ಬಾರಿ ನಾನು ನನ್ನ ಪ್ರೀತಿಯ ಡೋಲನ್ನು ಬಾರಿಸುವಂಥ ಯಾವುದೇ ಕೆಲಸವನ್ನು ಮಾಡಲಿಲ್ಲ. ಯಾರೂ ನನ್ನ ವಿರುದ್ಧ ನಿಲ್ಲಬಾರದೆಂದು ಎಚ್ಚರಿಕೆಯನ್ನು ವಹಿಸುತ್ತಿದ್ದೆ. ಹೊರನೋಟಕ್ಕೆ ನಾನು ಋಷಭರನ್ನು ‘ಋಷಭ್ ಅಣ್ಣ’ ಎಂದು ಕರೆಯುತ್ತಿದ್ದೆ. ನನಗೆ ತುಂಬಾ ಒಳ್ಳೆಯವನಾಗಿ ಕಾಣುವಂಥ ವಿಶೇಷತೆಗಳು ಋಷಭರಲ್ಲಿರಲಿಲ್ಲ. ಆದರೂ ಅವರಲ್ಲಿ ಏನೋ ಒಂದು ವಿಶೇಷತೆಯಿತ್ತು; ನಾನು ಅವರನ್ನು ನನ್ನ ಆಜ್ಞಾಕಾರಿ ಗೆಳೆಯನೆಂದು ತಿಳಿಯುತ್ತಿದ್ದೆ. ಋಷಭ್ ನನ್ನನ್ನು ತುಂಬಾ ಪ್ರೀತಿಸುತ್ತಾನೆ ಎಂದು ತೋರ್ಪಡಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದರು, ನನಗೆ ಅವರನ್ನು ನನ್ನ ಅಚ್ಚಿಗೆ ಹಾಕುವಲ್ಲಿ ಮಜವೆನಿಸುತ್ತಿತ್ತು.

